ಕರ್ನಾಟಕ ಸರ್ಕಾರ

# ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.

ಸಂಖ್ಯೆ:ಸಿ5[1]ಅಧೀ:ಬಡ್ತಿ:13:2012-13 ದಿನಾಂಕ:22ನೇ ಡಿಸೆಂಬರ್ 2012

## : ಜ್ಞಾ ಪ ನ

**ವಿಷಯ:** ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತರ ವ್ಯಾಪ್ತಿಯಲ್ಲಿ ವ್ಯಾಪ್ತಿಯಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರ.ದ.ಸಹಾಯಕರು/ಶೀಘ್ರಲಿಪಿಗಾರರಿಗೆ ಅಧೀಕ್ಷಕರ ಹುದ್ದೆಗೆ ಸ್ಥಾನಾಪನ್ನ ಬಡ್ತಿ ನೀಡುವ ಬಗ್ಗೆ.

**ಉಲ್ಲೇಖ:** ಸರ್ಕಾರದ ಅಧಿಸೂಚನೆ ಸಂ.ಡಿಪಿಎಆರ್:12:ಎಸ್‌ಡಿಇ:2007, ದಿ:29.01.2008.

2] ಸರ್ಕಾರದ ಸುತ್ತೋಲೆ ಸಂ:ಇಡಿ:250:ಡಿಪಿಐ:2006, ದಿನಾಂಕ.22.02.2008.

3] ಈ ಕಛೇರಿಯ ಅಧಿಸೂಚನೆ ಸಂಖ್ಯೆ:ಸಿ5[1]ಪ್ರ.ದ.ಸ:ಜೇಷ್ಠತೆ:10:2011-12 ದಿನಾಂಕ:01.08.2012.

4] ಈ ಕಛೇರಿಯ ಅಧಿಸೂಚನೆ ಸಂಖ್ಯೆ:ಸಿ5[2]ಶೀ.ಲಿ.ಜೇ.ಪ:09:2011-12 ದಿನಾಂಕ:04.11.2011.

5] ದಿನಾಂಕ:19.12.2012ರಂದು ನಡೆದ ಇಲಾಖಾ ಮುಂಬಡ್ತಿ ಸಭೆಯ ನಡಾವಳಿ.

*****

***ಪ್ರಸ್ತಾವನೆ:***

ಉಲ್ಲೇಖ [1] ಮತ್ತು [2]ರ ಸರ್ಕಾರದ ಅಧಿಸೂಚನೆ ಮತ್ತು ಸುತ್ತೋಲೆಗಳನ್ವಯ ಬೆಂಗಳೂರು ಆಯುಕ್ತರ ನೇಮಕಾತಿ ಪ್ರಾಧಿಕಾರದ ವ್ಯಾಪ್ತಿಯಾದ ಬೆಂಗಳೂರು ಮತ್ತು ಮೈಸೂರು ವಿಭಾಗಗಳಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರಥಮ ದರ್ಜೆ ಸಹಾಯಕರುಗಳ ಮತ್ತು ಶೀಘ್ರಲಿಪಿಗಾರರ ಅಂತಿಮ ಜೇಷ್ಠತಾ ಪಟ್ಟಿಗಳನ್ನು ಉಲ್ಲೇಖ [3] ಮತ್ತು [4]ರಂತೆ ಪ್ರಕಟಿಸಲಾಗಿದೆ. ಈ ವೃಂದದ ನೌಕರರುಗಳಿಗೆ ಅಧೀಕ್ಷಕರ ಹುದ್ದೆಗಳಿಗೆ ಸ್ಥಾನಾಪನ್ನ ಬಡ್ತಿ ನೀಡುವ ಬಗ್ಗೆ ಸಲ್ಲಿಸಿದ್ದ ಪ್ರಸ್ತಾವನೆಗಳನ್ನು ಪರಿಶೀಲಿಸಲಾಗಿದೆ. ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಅಧೀಕ್ಷಕರ ಹುದ್ದೆಗಳನ್ನು 35:1ರ ಅನುಪಾತದಂತೆ ಕ್ರಮವಾಗಿ ಪ್ರ.ದ.ಸ ಹಾಗೂ ಶೀಘ್ರಲಿಪಿಗಾರರ ವೃಂದಗಳಿಗೆ ವರ್ಗೀಕರಿಸಲಾಗಿದೆ.

ಪ್ರಸ್ತುತ ಖಾಲಿ ಇರುವ ಅಧೀಕ್ಷಕರ ಹುದ್ದೆಗಳನ್ನು ಅರ್ಹ ಪ್ರಥಮ ದರ್ಜೆ ಸಹಾಯಕರುಗಳಿಗೆ ಜೇಷ್ಟತೆ ಮತ್ತು ಮೀಸಲಾತಿ ನಿಯಮಗಳನ್ವಯ ಸ್ಥಾನಾಪನ್ನ ಬಡ್ತಿ ನೀಡಿ ತುಂಬಲು ಪರಿಶೀಲಿಸಿ ಕೆಳಗಿನಂತೆ ಆದೇಶಿಸಿಸಲಾಗಿದೆ.

***ಆದೇಶ:***

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಆಯುಕ್ತರ ನೇಮಕಾತಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಈ ಕೆಳಕಂಡ 14 ಪ್ರಥಮ ದರ್ಜೆ ಸಹಾಯಕರು / ಶೀಘ್ರಲಿಪಿಗಾರರಿಗೆ ಈ ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಕೆಳಕಂಡ ಷರತ್ತುಗಳೊಂದಿಗೆ ಜೇಷ್ಟತೆ ಮತ್ತು ಮೀಸಲಾತಿ ನಿಯಮಗಳನ್ವಯ ಅಧೀಕ್ಷಕರ ಹುದ್ದೆಯ ವೇತನ ಶ್ರೇಣಿ ರೂ. 20,000-36,300 ರಲ್ಲಿ ಸ್ಥಾನಾಪನ್ನ ಬಡ್ತಿ ನೀಡಿ, ದಿನಾಂಕ:22.12.2012ರಂದು ನಡೆದ ಸ್ಥಳ ಆಯ್ಕೆ ಪ್ರಕ್ರಿಯೆಯಲ್ಲಿ ನೌಕರರು ಸ್ವತ: ಸ್ಥಳ ಆಯ್ಕೆ ಮಾಡಿಕೊಂಡಂತೆ ಸ್ಥಳನಿಯುಕ್ತಿಗೊಳಿಸಿ ಆದೇಶಿಸಿದೆ.

| ಕ್ರ. ಸಂ. | ಜೇಷ್ಠತಾ ಸಂಖ್ಯೆ | ಪ್ರಥಮ ದರ್ಜೆ ಸಹಾಯಕರ ಶೀಘ್ರಲಿಪಿಗಾರರ ಹೆಸರು ಮತ್ತು ಕಾರ್ಯನಿರ್ವಹಿಸುತ್ತಿರುವ ಶಾಲೆ/ಕಛೇರಿ ವಿಳಾಸ. ಶ್ರೀ / ಶ್ರೀಮತಿ | ಅಧೀಕ್ಷಕರ ಹುದ್ದೆಯಲ್ಲಿ ಸ್ಥಳ ನಿಯುಕ್ತಿಗೊಳಿಸಿದ ಕಛೇರಿ |
|---|---|---|---|
| *01.* | 61 | ಭಾಗ್ಯಲಕ್ಷ್ಮಮ್ಮ, ಪ್ರ.ದ.ಸ., ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ, ಬೆಂಗಳೂರು. | ಆಯುಕ್ತರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು. [ಶ್ರೀಮತಿ ಉಷಾದೇವಿ.ಹೆಚ್.ಎಸ್., ಅಧೀಕ್ಷಕರು ಇವರ ಬಡ್ತಿ ಏವೇಜು] |
| *02.* | 63 | ಸರಸ್ವತಿ, ಪ್ರ.ದ.ಸ., ಮಹಾರಾಣಿ ಸರ್ಕಾರಿ ಪದವಿ ಪೂರ್ವ ಕಾಲೇಜು, [ಪ್ರೌಢಶಾಲಾ ವಿಭಾಗ], ಮೈಸೂರು | ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಚಾಮರಾಜನಗರ [ಶ್ರೀ.ಟಿ.ಎಂ. ಬಸವರಾಜು, ಅಧೀಕ್ಷಕರು ಇವರ ಬಡ್ತಿ ಏವೇಜು] |

| | | | |
|---|---|---|---|
| ***03.*** | 68 | ಗಿರಿಜಾಂಬ, ಪ್ರ.ದ.ಸ., ಉಪನಿರ್ದೇಶಕರ ಕಛೇರಿ, ಸಾ.ಶಿ.ಇಲಾಖೆ, ಮೈಸೂರು ಜಿಲ್ಲೆ, ಮೈಸೂರು. | ಉಪ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಮಂಡ್ಯ. [ಶ್ರೀಮತಿ ಸೌಭಾಗ್ಯಮ್ಮ, ಅಧೀಕ್ಷಕರು ಇವರ ವರ್ಗಾವಣಾ ಖಾಲಿ ಹುದ್ದೆ ಎದೆಯಾ ಐವೇಜು] |
| ***04.*** | 74 | ನಾಗಪ್ರಸಾದ್.ಎಂ, ಪ್ರ.ದ.ಸ., ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು. | ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ, ಬೆಂಗಳೂರು. [ಶ್ರೀಮತಿ ಭಾಗ್ಯಲಕ್ಷಮ್ಮ, ಅಧೀಕ್ಷಕರು ಇವರು ದಿ:31.12.2012ರಂದು ವಯೋನಿವೃತ್ತಿ ಖಾಲಿ ಐವೇಜು] |
| ***05.*** | 126 | ಕೆ.ವಿಜಯಕುಮಾರ್, ಪ್ರ.ದ.ಸ., ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಸಾ.ಶಿ.ಇಲಾಖೆ, ತರೀಕೆರೆ, ಚಿಕ್ಕಮಗಳೂರು ಜಿಲ್ಲೆ | ಉಪ ನಿರ್ದೇಶಕರ ಕಛೇರಿ, ಸಾ.ಶಿ.ಇಲಾಖೆ, ಚಿತ್ರದುರ್ಗ. [ಶ್ರೀ ಆರ್. ತಿಪ್ಪೇಸ್ವಾಮಿ, ಅಧೀಕ್ಷಕರು ಇವರ ಬಡ್ತಿ ಐವೇಜು] |
| ***06.*** | 127 | ಎನ್.ರಾಮನಾಥ, ಪ್ರ.ದ.ಸ., ಸರ್ಕಾರಿ ಪ್ರೌಢ ಶಾಲೆ, ನವಿಲೆ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ. | ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬನಶಂಕರಿ, ಬೆಂಗಳೂರು. [ಶ್ರೀ ಎಸ್.ಎನ್.ಸುರೇಶ್, ಅಧೀಕ್ಷಕರು ಇವರ ಬಡ್ತಿ ಐವೇಜು] |
| ***07.*** | 128 | ಎನ್.ರಜನಿಕಾಂತ, ಪ್ರ.ದ.ಸ., ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಸಾ.ಶಿ.ಇಲಾಖೆ, ದಕ್ಷಿಣ ವಲಯ-2, ತುಳಸಿತೋಟ, ಬೆಂಗಳೂರು-53 | ಕರ್ನಾಟಕ ರಾಜ್ಯ ಪಠ್ಯ ಪುಸ್ತಕ ಸಂಘ, [ಡಿ.ಎಸ್.ಇ.ಆರ್.ಟಿ. ಕಟ್ಟಡ] ಬನಶಂಕರಿ, ಬೆಂಗಳೂರು. [ಶ್ರೀಮತಿ ಟಿ.ವಿ.ಸರಸ್ವತಮ್ಮ, ಅಧೀಕ್ಷಕರು ಇವರ ಬಡ್ತಿ ಐವೇಜು] |
| ***08.*** | 131 | ಎನ್.ಇ.ಅಶೋಕ್‌ಕುಮಾರ್, ಪ್ರ.ದ.ಸ., ಲಾಲ್‌ಬಹದ್ದೂರ್ ಶಾಸ್ತ್ರಿ ಸರ್ಕಾರಿ ಪದವಿ ಪೂರ್ವ ಕಾಲೇಜು [ಪ್ರೌಢ ಶಾಲಾ ವಿಭಾಗ], ಚಿಕ್ಕಮಗಳೂರು. | ಉಪ ನಿರ್ದೇಶಕರ ಕಛೇರಿ, ಸಾ.ಶಿ.ಇಲಾಖೆ, ರಾಮನಗರ. [ಶ್ರೀ ಕೆ.ಆಂಜನಪ್ಪ, ಅಧೀಕ್ಷಕರು ಇವರ ಬಡ್ತಿ ಐವೇಜು] |
| ***09.*** | 134 | ಕೆ.ಸುಬ್ಬರಾವ್, ಪ್ರ.ದ.ಸ., ಉಪನಿರ್ದೇಶಕರ ಕಛೇರಿ, ಸಾ.ಶಿ.ಇಲಾಖೆ, ಚಿತ್ರದುರ್ಗ. | ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಸಾ.ಶಿ.ಇಲಾಖೆ, ಹರಿಹರ, ದಾವಣಗೆರೆ ಜಿಲ್ಲೆ. [ಶ್ರೀ ಮಲ್ಲಪ್ಪ, ಅಧೀಕ್ಷಕರು ಇವರ ನಿವೃತ್ತಿ ಐವೇಜು] |
| ***10.*** | 135 | ಬಿ.ಗಣೇಶ, ಪ್ರ.ದ.ಸ., ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ, ಬೆಂಗಳೂರು. | ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಸಾ.ಶಿ.ಇಲಾಖೆ, ಹಿರಿಯೂರು, ಚಿತ್ರದುರ್ಗ ಜಿಲ್ಲೆ. [ಶ್ರೀ ಅರಿಫ್ ಉಲ್ಲಾ ಖಾನ್, ಅಧೀಕ್ಷಕರು ಇವರ ಬಡ್ತಿ ಐವೇಜು] |
| ***11.*** | 271 | ಸಿದ್ದಯ್ಯ.ಎನ್, ಪ್ರ.ದ.ಸ., ಉಪನಿರ್ದೇಶಕರ ಕಛೇರಿ, ಸಾ.ಶಿ.ಇಲಾಖೆ, ಚಾಮರಾಜನಗರ. | ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಸಾ.ಶಿ.ಇಲಾಖೆ ಸೋಮವಾರಪೇಟೆ, ಕೊಡಗು ಜಿಲ್ಲೆ. [ಶ್ರೀ ರಾಜೀವಲೋಚನ, ಅಧೀಕ್ಷಕರು ಇವರ ನಿಧನದಿಂದ ಉಂಟಾದ ಐವೇಜು] |
| ***12.*** | 363 | ಸಿ.ಬಾಲಸುಬ್ರಹ್ಮಣ್ಯ, ಪ್ರ.ದ.ಸ., ಸರ್ಕಾರಿ ಪ್ರೌಢ ಶಾಲೆ, ಗೆದರೆ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ. | ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಸಾ.ಶಿ.ಇಲಾಖೆ ಸಕಲೇಶಪುರ, ಹಾಸನ ಜಿಲ್ಲೆ. [ಶ್ರೀ ಶಂಕರನಾರಾಯಣ ಪ್ರಸಾದ್, ಅಧೀಕ್ಷಕರು ಇವರು ಜವಳಿ ಸಚಿವರ ಆಪ್ತ ಸಹಾಯಕರಾಗಿ ನಿಯೋಜನೆಗೊಂಡಿರುವ ಐವೇಜು] |
| ***13.*** | 548 | ಬಿ.ಜಿ.ಪ್ರಕಾಶ್, ಪ್ರ.ದ.ಸ., ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಸಾ.ಶಿ.ಇಲಾಖೆ, ಉತ್ತರ ವಲಯ-3, ಬೆಂಗಳೂರು ಉತ್ತರ ಜಿಲ್ಲೆ. | ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಸಾ.ಶಿ.ಇಲಾಖೆ ತೀರ್ಥಹಳ್ಳಿ, ಶಿವಮೊಗ್ಗ ಜಿಲ್ಲೆ. [ಶ್ರೀ ಶಾಂತರಾಜು, ಅಧೀಕ್ಷಕರು ಇವರ ಬಡ್ತಿ ಐವೇಜು] |
| ***14.*** | 01 | ಬಿ.ವಿ.ಗಿರಿಜಮ್ಮ, ಶೀಘ್ರಲಿಪಿಗಾರರು, ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ, ಬೆಂಗಳೂರು. | ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ. [ಶ್ರೀಮತಿ ಎ.ವಿನೋದ, ಅಧೀಕ್ಷಕರು ಇವರ ಬಡ್ತಿ ಐವೇಜು] |

***ಷರತ್ತುಗಳು:***

***01.*** ನೌಕರರು ಅಧೀಕ್ಷಕರ ಹುದ್ದೆಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕದಿಂದ ಅಧೀಕ್ಷಕರ ಹುದ್ದೆಯಲ್ಲಿ ಕ.ನಾ.ಸೇ.ನಿಯಮ 42[ಬಿ] ಅನ್ವಯ ವೇತನ ನಿಗದಿಗೆ ಅರ್ಹರಿರುತ್ತಾರೆ.

**02.** ನಿಗಧಿಪಡಿಸಿರುವ ಎಲ್ಲಾ ಇಲಾಖಾ ಪರೀಕ್ಷೆಗಳನ್ನು ತೇರ್ಗಡೆ ಹೊಂದಿರುವ ಬಗ್ಗೆ ಕಛೇರಿ ಮುಖ್ಯಸ್ಥರು ಸೂಕ್ತ ದಾಖಲೆಗಳನ್ನು ಪರಿಶೀಲಿಸಿ ಖಚಿತಪಡಿಸಿಕೊಳ್ಳುವುದು.

**03.** ಈ ನೌಕರರ ಮೇಲೆ ಶಿಸ್ತು ಪ್ರಕರಣ, ಇಲಾಖಾ ವಿಚಾರಣೆ, ನ್ಯಾಯಾಂಗ ಪ್ರಕರಣ ಬಾಕಿ ಇರುವಂತಿಲ್ಲ. ಅಲ್ಲದೆ ಸರ್ಕಾರಿ ನೌಕರನ ವಿರುದ್ಧ ಇಲಾಖಾ ವಿಚಾರಣೆ ಅಥವಾ ಕ್ರಿಮಿನಲ್ ಮೊಕದ್ದಮೆ ಪ್ರಾರಂಭವಾಗಿ ಅಂತಹ ಇಲಾಖಾ ವಿಚಾರಣೆ ಅಥವಾ ಕ್ರಿಮಿನಲ್ ಮೊಕದ್ದಮೆ ದಂಡನೆಯಲ್ಲಿ ಪರ್ಯಾವಸಾನಗೊಂಡಿದ್ದಲ್ಲಿ, ಆ ದಂಡನೆಯು ಜಾರಿಯಲ್ಲಿರುವ ಅವಧಿಯಲ್ಲಿ ಅಂತಹ ಸರ್ಕಾರಿ ನೌಕರರಿಗೆ ಮುಂಬಡ್ತಿ ಹೊಂದಲು ಆಸ್ಪದವಿಲ್ಲವೆಂದು ಈ ಮೂಲಕ ಸ್ಪಷ್ಟೀಕರಿಸಲಾಗಿದೆ. ಪ್ರಥಮ ದರ್ಜೆ ಸಹಾಯಕರ ಹುದ್ದೆಯಿಂದ ಬಿಡುಗಡೆ ಮಾಡುವ ಮುನ್ನ, ಇದನ್ನು ಖಚಿತಪಡಿಸಿಕೊಳ್ಳುವುದು.

**04.** ಈ ಎಲ್ಲಾ ಅಂಶಗಳನ್ನು ಕಛೇರಿ ಮುಖ್ಯಸ್ಥರು ಪರಿಶೀಲಿಸಿ ಸ್ಥಾನಾಪನ್ನ ಬಡ್ತಿ ಬಗ್ಗೆ ಸೇವಾ ಪುಸ್ತಕದಲ್ಲಿ ನಮೂದಿಸಲು ಕ್ರಮ ವಹಿಸಿ ಈ ಕಛೇರಿಗೆ ವರದಿ ಮಾಡತಕ್ಕದ್ದು.

**05.** ಮೇಲಿನ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು. ಈ ಷರತ್ತುಗಳು ಪೂರೈಕೆ ಆಗದಿದ್ದಂತಹ ನೌಕರರುಗಳನ್ನು ಸ್ಥಾನಾಪನ್ನ ಬಡ್ತಿಗೆ ಪರಿಗಣಿಸಬಾರದೆಂದು ಸ್ಪಷ್ಟಪಡಿಸಿದೆ.

**06.** ಸಂಬಂಧಿಸಿದ ಕಛೇರಿ ಮುಖ್ಯಸ್ಥರುಗಳು ಸಂಬಧಿಸಿದ ನೌಕರರನ್ನು ಸಕಾಲದಲ್ಲಿ ಕರ್ತವ್ಯದಿಂದ ಬಿಡುಗಡೆಗೊಳಿಸುವುದು.

**07.** ಬಡ್ತಿ ಹೊಂದಿ ಸ್ಥಳ ನಿಯುಕ್ತಿಗೊಳಿಸಿರುವ ನೌಕರರು ಸ್ಥಳ ನಿಯುಕ್ತಿಗೊಳಿಸಿರುವ ಕಚೇರಿಯಲ್ಲಿ ಈ ಆದೇಶ ತಲುಪಿದ 15 ದಿನಗಳ ಒಳಗಾಗಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳತಕ್ಕದ್ದು ತಪ್ಪಿದಲ್ಲಿ ನಿಯಮಾನುಸಾರ ಬಡ್ತಿಯನ್ನು ರದ್ದುಪಡಿಸಲಾಗುವುದು.

**08.** ನೌಕರರ ಬಿಡುಗಡೆ ಮತ್ತು ಸೇರ್ಪಡೆ ಬಗ್ಗೆ ತಪ್ಪದೆ ಈ ಕಛೇರಿಗೆ ವರದಿ ಸಲ್ಲಿಸುವುದು.

[ವಿ.ಜಿ.ದಿವಾಕರ್]
ಅಪರ ಆಯುಕ್ತರು [ಆಡಳಿತ]

**ಪ್ರತಿಗಳು:**

**01.** ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ.
**02.** ಕಾರ್ಯದರ್ಶಿ ಹಾಗೂ ಪದನಿಮಿತ್ತ ಸಹನಿರ್ದೇಶಕರು, ಸಾ.ಶಿ.ಇಲಾಖೆ ಮೈಸೂರು ವಿಭಾಗ
**03.** ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ.
**04.** ರಾಜ್ಯದಲ್ಲಿನ ಎಲ್ಲಾ ಜಿಲ್ಲಾ ಶಿಕ್ಷಣ ಮತ್ತು ತರಭೇತಿ ಸಂಸ್ಥೆಯ ಪ್ರಾಂಶುಪಾಲರುಗಳಿಗೆ.
**05.** ಮಾನ್ಯ ಆಯುಕ್ತರ ಆಪ್ತ ಕಾರ್ಯದರ್ಶಿಗಳಿಗೆ ಮಾಹಿತಿಗಾಗಿ.
**06.** ಸಹನಿರ್ದೇಶಕರು [ಆಡಳಿತ] ರವರ ಆಪ್ತ ಶಾಖೆಗೆ.
**07.** ಸಂಬಂಧಿಸಿದ ಕಛೇರಿ : ಶಾಲಾ ಕಾಲೇಜು ಮುಖ್ಯಸ್ಥರುಗಳಿಗೆ
**08.** ಸಂಬಂಧಿಸಿದ ನೌಕರರುಗಳಿಗೆ.
**09.** ಜ್ಞಾಪನಾ ಕಡತ / ಕಛೇರಿ ಪ್ರತಿ.